**<u>ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ</u>**
**<u>ಚನ್ನಪಟ್ಟಣ</u>**

C C No. 244/2018

CW. 1 PW.1

ಹೆಸರು ಃ ಪಂಜು
ತಂದೆ/ಗಂಡ ಃ ಧರ್ಮಾರ್
ವಯಸ್ಸು ಃ 38 ವರ್ಷ
ಉದ್ಯೋಗ ಃ ಕೂಲಿ
ವಾಸ ಃ ಚನ್ನಪಟ್ಟಣ.

ಸಾಕ್ಷಿಯನ್ನು ಕರೆಸಲಾಯಿತು, ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯ ವಿಚಾರಣೆ ಎಪಿಪಿ ಯವರಿಂದಃ ದಿ.17.01.2019.

1. ಚಾಸಾ-2 ನನ್ನ ಗಂಡ. ಚಾಸಾ-3 ಹಾಗೂ 4 ನನ್ನ ಮಕ್ಕಳು. ಚಾಸಾ-5 ಹಾಗೂ 6 ಗೊತ್ತು. ನ್ಯಾಯಾಲಯದಲ್ಲಿರುವ ಆರೋಪಿಗಳು ಗೊತ್ತು. ಚನ್ನಪಟ್ಟಣದ ತಮಿಳು ಕಾಲೋನಿಯಲ್ಲಿ ನನಗೆ ಸೇರಿದ ನಿವೇಶನ ಇದೆ. ಇದರಲ್ಲಿ ಇದ್ದ ಹಳೆಯ ಮನೆ ಕೆಡವಿ ಹೊಸ ಮನೆಯನ್ನು ಕಟ್ಟಲು ಒಂದು ವರ್ಷದ ಹಿಂದೆ ನಾನು, ಚಾಸಾ-2 ರಿಂದ 4 ಹೋಗಿದ್ದೆವು. ಸದರಿ ಜಾಗದಲ್ಲಿ ನಮಗೆ ಮನೆ ಕಟ್ಟಲು ಆರೋಪಿಗಳು ಅಡ್ಡಿ ಪಡಿಸಿದ್ದರು. ಇದರ ಬಾಬ್ತು ನಾನು ಕಾನೂನು ಕ್ರಮ ಜರುಗಿಸಿದ್ದೆ. ಒಂದು ದಿನ ಸಂಜೆ 6.00 ಗಂಟೆ ಸಮಯದಲ್ಲಿ ಆರೋಪಿಗಳು ನಮ್ಮ ಮನಗೆ ಏಕಾಏಕಿ ನುಗ್ಗಿ 1ನೇ ಆರೋಪಿ ನನ್ನ ಕೆನ್ನೆಯ ಮೇಲ್ ಭಾಗಕ್ಕೆ, 2ನೇ ಆರೋಪಿ ಚಾಕುವಿನಿಂದ ಚಾಸಾ-2 ರ ಬಲ ಹೆಬ್ಬೆರಳಿಗೆ 3 ಹಾಗೂ 4ನೇ ಆರೋಪಿಗಳು ನನ್ನ ಮಕ್ಕಳಿಗೆ ಕೈಯಿಂದ ಹೊಡೆದಿರುತ್ತಾರೆ. ಆರೋಪಿಗಳು ನಮ್ಮನ್ನು ಸುಟ್ಟು ಹಾಕುತ್ತೇವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ. ನಂತರ ಚನ್ನಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ ಈ ಬಾಬ್ತು ನಾನು ದೂರನ್ನು ನೀಡಿರುತ್ತೇನೆ. ಈಗ ನೋಡುತ್ತಿರುವ ದೂರನ್ನು ನಾನೇ ಹೇಳಿ ಬರೆಸಿದ್ದೇನೆ ದೂರನ್ನು **<u>ನಿಪಿ-1</u>** ಎಂದು ಗುರುತಿಸಲಾಯಿತು. ನ್ಯಾಯಾಲಯದ ಮಂದೆ ಇರುವ ಇಟ್ಟಿಗೆ ಹಾಗೂ ಚಾಕುವನ್ನು ನೋಡಿ ಗುರುತಿಸುತಿತದ್ದೇನೆ ಇವುಗಳನ್ನು ಕ್ರಮವಾಗಿ ಮು ಮಾಲು 1 ಹಾಗೂ 2 ಎಂದು

ಗುರುತಿಸಲಾಯಿತು. ಮು ಮಾಲು 1 ಹಾಗೂ 2 ಆರೋಪಿಗಳು ಕೃತ್ಯಕ್ಕೆ ಬಳಸಿದ ಆಯುಧಗಳು.

<u>ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾರ್ಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಲಾಯಿತು. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾರ್ಟೀ ಸವಾಲಿಗೆ ಅನುಮತಿ ನೀಡಲಾಯಿತು.</u>

<u>ಪಾರ್ಟೀ ಸವಾಲು ಎ ಪಿ ಪಿ ಯವರಿಂದ</u>

2. ನಿಪಿ-1 ರಲ್ಲಿ ನಾನು ಆರೋಪಿತರು ನಿಮಗೊಂದು ಗತಿ ಕಾಣಿಸುತ್ತಿದ್ದೇನೆಂದು ಬರೆಸಿದ್ದೇನೆ ಎಂದರೆ ಸರಿ. 1 ಹಾಗೂ 2 ನೇ ಅರೋಪಿಗಳು ನನಗೆ ಚಾಸಾ-2 ರವರಿಗೆ ಗಾಡಿ ಹತ್ತಿಸಿ ಸಾಯಿಸುತ್ತೇವೆಂದು ಬೆದರಿಕೆ ಹಾಕಿದ್ದರು ಎಂದು ದೂರಿನಲ್ಲಿ ಬರೆಸಿದ್ದೇನೆ ಎಂದರೆ ಸರಿ. ಸದರಿ ಘಟನೆಗೆ ಚಾಸಾ-5 ಪ್ರತ್ಯಕ್ಷ ಸಾಕ್ಷಿ ಎಂದು ಬರೆಸಿದ್ದೇನೆ ಎಂದರೆ ಸರಿ

<u>ಪಾರ್ಟೀ ಸವಾಲು ಆರೋಪಿ ಪರ ವಕೀಲರಿಂದಃ</u>

3. ನನ್ನ ಮನೆಯ ಎದುರುಗಡೆ ಒಂದು ದೇವಸ್ಥಾನ ಇದೆ ಎಂದರೆ ಸರಿ. ಸದರಿ ದೇವಸ್ಥಾನ ರಸ್ತೆಯಲ್ಲಿದೆ ಎಂದರೆ ಸರಿ. ದೇವಸ್ಥಾನ ಹಾಗೂ ನನ್ನ ಮನೆಯ ಮಧ್ಯೆಯ ರಸ್ತೆ ಚಿಕ್ಕದಾಗಿದೆ ಎಂದರೆ ನನ್ನ ಮನೆ ಸ್ವಲ್ಪ ದೂರದಲ್ಲಿ ಬರುತ್ತದೆ. ರಸ್ತೆಯನ್ನು ಒತ್ತುಮಾಡಿ ನನ್ನ ಮನೆ ಕಟ್ಟಿದ್ದೇನೆ ಎಂದರೆ ಸುಳ್ಳು. ಊರಿನ ಗ್ರಾಮಸ್ಥರು ಅಧಿಕಾರಿಗಳಿಗೆ ಆರ್ಜಿಯನ್ನು ನೀಡಿ ರಸ್ತೆಯನ್ನು ಅಗಲ ಮಾಡಿಸಿದ್ದಾರೆ ಎಂದರೆ ಸರಿ. ಆರೋಪಿತರು ಸದರಿ ಆರ್ಜಿಯನ್ನು ನೀಡಿದ ಗ್ರಾಮಸ್ಥರ ಪೈಕಿ ಒಬ್ಬರಾಗಿದ್ದರು ಎಂದರೆ ಗೊತ್ತಿಲ್ಲ.

4. ನನ್ನ ಜಾಗಕ್ಕೆ ಸಂಬಂಧಿಸಿದಂತೆ ಸಿವಿಲ್ ವ್ಯಾಜ್ಯವನ್ನು ಆರೋಪಿಗಳ ವಿರುದ್ದ ಹಾಕಿದ್ದೇನೆ. ಆರೋಪಿತರು ಸದರಿ ಸಿವಿಲ್ ವ್ಯಾಜ್ಯದಲ್ಲಿ ಪಕ್ಷಗಾರರಲ್ಲ ಎಂದರೆ ಸುಳ್ಳು. ನನ್ನ ಮನೆಯ ಆಜುಬಾಜು ವಾಸದ ಮನೆಗಳು ಇವೆ.

5. ಆರೋಪಿಗಳು ನನ್ನ ಮನಗೆ ಆಕ್ರಮ ಪ್ರವೇಶ ಮಾಡಿರುತ್ತಾರೆ.ಆರೋಪಿಗಳು ನನ್ನ

ಮನೆಯಲ್ಲಿಯೇ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ. ಸದರಿ ಜಗಳ ಅಂದಾಜು ಅರ್ಧ ಗಂಟೆ ನಡೆದಿರುತ್ತದೆ. ಈ ಸಮಯದಲ್ಲಿ ಅಕ್ಕಪಕ್ಕದ ಮನೆಯವರು ಬಂದಿರಲಿಲ್ಲ.

6. ಇಟ್ಟಿಗೆಯಿಂದ ಹೊಡೆದಿದ್ದರ ಪರಿಣಾಮ ನನಗೆ ರಕ್ತಗಾಯವಾಗಿತ್ತು ಬಟ್ಟೆಯು ಸಹ ರಕ್ತವಾಗಿತ್ತು. ಸದರಿ ಬಟ್ಟೆಯನ್ನು ಪೋಲೀಸರಿಗೆ ಕೊಟ್ಟಿಲ್ಲ. ಚಾಸಾ-2 ರವರ ಬಟ್ಟೆಯು ಸಹ ರಕ್ತ ಕಲೆಗಳಾಗಿತ್ತು. ನೆಲೆದ ಮೇಲೆಯು ಸಹ ರಕ್ತದ ಕಲೆಗಳು ಬಿದ್ದಿತು. ಇದನ್ನು ಪೋಲೀಸರಿಗೆ ನಾನು ಹೇಳಿಲ್ಲ. ಚಾಸಾ-5 ನಾನು ಮಾಡುವ ಚಕ್ಕಲಿ ವ್ಯಾಪಾರಕ್ಕೆ ಎಣ್ಣೆಯನ್ನು ಒದಗಿಸುತ್ತಾರೆ. ಚಾಸಾ-5 ನಮೊಂದಿಗೆ ಉತ್ತಮ ಬಾಂದವ್ಯ ಹೊಂದಿದ್ದಾರೆ ಎಂದರೆ ಅಷ್ಟಾಗಿ ಇಲ್ಲ. ಮು ಮಾಲು 2 ಚೂರಿ ಎಂದರೆ ಗೊತ್ತಿಲ್ಲ. ಮು ಮಾಲು 2 ಚಾಕು ಅಲ್ಲ ಎಂದರೆ ಸರಿ.

7. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಆರೋಪಿಗಳು ನನಗೆ ಹಾಗೂ ಚಾಸಾ-2 ರಿಂದ 4 ರವರಗೆ ಹಲ್ಲೆ ಮಾಡಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ. ನನ್ನ ನಿವೇಶನದ ಜಾಗ ರಸ್ತೆಗೆ ಹೋಗಿದ್ದರಿಂದ ಆರೋಪಿಗಳ ವಿರುದ್ದ ಈ ಸುಳ್ಳು ಮೊಕ್ಕದ್ದಮೆಯ ಸಲ್ಲಿಸಿದ್ದೇನೆ ಎಂದರೆ ಸುಳ್ಳು. ನನ್ನ ಜಾಗ ರಸ್ತೆಗೆ ಉಪಯೋಗವಾಗಿದ್ದರಿಂದ ಇದಕ್ಕೆ ಆರೋಪಿಗಳು ಹೊಣೆ ಎಂದು ಈ ಮೊಕ್ಕದ್ದಮೆ ಸಲ್ಲಿಸಿದ್ದೇನೆ ಎಂದರೆ ಸುಳ್ಳು.

8. ಮು ಮಾಲು 1 ನಮ್ಮ ಮನೆ ಕಟ್ಟಲು ಇಟ್ಟಿಕೊಂಡಿದ್ದ ಇಟ್ಟಿಗೆ ಎಂದರೆ ಪಕ್ಕದ ಮನೆಯವರದು. ಮು ಮಾಲು 1 ಸಾಮಾನ್ಯ ವಾಗಿ ಸಿಗುತ್ತದೆ ಎಂದರೆ ಸರಿ. ಮು ಮಾಲು 1 ಹಾಗೂ 2 ನ್ನು ಈ ಕೇಸು ಬಲ ಪಡಿಸಲು ತನಿಖಾಧಿಕಾರಿಗಳಿಗೆ ನೀಡಿದ್ದೇನೆ ಎಂದರೆ ಸುಳ್ಳು. ಬೇರೆ ಕಾರಣಗಳಿಂದ ಆದ ಗಾಯಕ್ಕೆ ಆರೋಪಿಗಳ ಹೆಸರನ್ನು ಹಚ್ಚಿದ್ದೇನೆ ಎಂದರೆ ಸುಳ್ಳು ಆರೋಪಿಗಳ ವಿರುದ್ದ ಸುಳ್ಳು ಮೊಕ್ಕದ್ದಮೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು).**

**ಓ ಹೇ ಕೇ ಸ ಓ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ.ಎಫ್.ಸಿ ಚನ್ನಪಟ್ಟಣ.**